ಅಧ್ಯಕ್ಷರು: ಬರಗಾಲದ ಮೇಲೆ ಮಾತನಾಡುವವರು ಮಾತನಾಡಲಿ.

ಶ್ರೀ ಹೆಚ್.ಡಿ. ರೇವಣ್ಣ: 4.30 ಗಂಟೆಗೆ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ.

ಶ್ರೀ ಆರ್. ಅಶೋಕ: ಮಾನ್ಯ ಅಧ್ಯಕ್ಷರೆ, ಅವರು ಏನು ಹೇಳಿದ್ದಾರೆ ಅದು ಕಡತದಿಂದ ತೆಗೆಸಿ ಹಾಕಬೇಕು.

ಅಧ್ಯಕ್ಷರು: ಕಡತದಿಂದ ತೆಗೆಸಿ ಹಾಕಿದ್ದೇನೆ.

ಶ್ರೀ ಹೆಚ್. ಡಿ. ರೇವಣ್ಣ: ಅದನ್ನು ಕಡತದಿಂದ ತೆಗೆದು ಹಾಕುವುದು ಬೇಡ

(ಜೆಡಿಎಸ್ ಶಾಸಕಾಂಗ ಪಕ್ಷದ ಸದಸ್ಯರು ಬಾವಿಯಲ್ಲಿ ಬಂದು ಧರಣಿ ಪ್ರಾರಂಭಿಸಿದರು)

ಅಧ್ಯಕ್ಷರು: ಅವರಿಗೆ ಏನೂ interest ಇಲ್ಲ. ಅಧಿವೇಶನ ನಡೆಸುವ ಬಗ್ಗೆ ಆಸಕ್ತಿ ಇಲ್ಲ. ಚರ್ಚೆ ಮಾಡಬೇಕು. ವಿಷಯ ಮಂಡನೆ ಮಾಡಬೇಕು, ಯಾವುದೂ ಇಷ್ಟವಿಲ್ಲ. ಸದನ ನಡೆಸುವ ಆಸಕ್ತಿ ನಿಮಗೆ ಇಲ್ಲ ಚರ್ಚೆ ಮಾಡಲಿಕ್ಕೆ ಆಸಕ್ತಿ ಇಲ್ಲ. This is not a good behavior.

(ಸದನ ಪುನಃ 3.00 ಗಂಟೆಗೆ ಸೇರುವಂತೆ ಮುಂದೂಡಲಾಯಿತು)

3–00 pm

ಸದನದ ಕಲಾಪವು 3.00 ಗಂಟೆ 18 ನಿಮಿಷಕ್ಕೆ ಪ್ರಾರಂಭವಾಯಿತು ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು

(ಸದನದ ಕಲಾಪ ಆರಂಭವಾಗುತ್ತಿದ್ದಂತೆ ಜೆಡಿ(ಎಸ್) ಶಾಸಕರು ಸದನದ ಬಾವಿಗೆ ಬಂದು ಧರಣಿಯನ್ನು ಮುಂದುವರೆಸಿದರು)

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೇ, ಏನು ತೀರ್ಮಾನ ಮಾಡಿದ್ದೀರೆಂದು ಹೇಳಿ.

ಅಧ್ಯಕ್ಷರು: ನಾನು ಈಗಾಗಲೇ ಹೇಳಿಬಿಟ್ಟಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ: ತಾವು ತೀರ್ಮಾನ ಏನು ಎಂದು ಹೇಳಿದರೆ ಹೇಳುತ್ತೇನೆ.

ಅಧ್ಯಕ್ಷರು: ನಾನು ಕಡತದಿಂದ ತೆಗೆದು ಹಾಕಿದಂತಹ...

(ಗೊಂದಲ)

ಒಬ್ಬರು ಮಾನ್ಯ ಸದಸ್ಯರು: ನಿಂಬೆಹಣ್ಣು ಜೇಬಿನಲ್ಲಿ ಇಟ್ಟುಕೊಂಡು ಬಂದಿದ್ದರೆ, ಬಲಮಗುಲಲ್ಲಿ ಎದ್ದಿದ್ದರೆ ಹೀಗಾಗುತ್ತಿರಲಿಲ್ಲ. ಬಲಮಗುಲಲ್ಲಿ ಎದ್ದಿಲ್ಲ, ನಿಂಬೆ ಹಣ್ಣು ಜೇಬಿನಲ್ಲಿ ಇಟ್ಟುಕೊಂಡು ಬಂದಿಲ್ಲ. ಬೇಕಾದರೆ ನೀವು ಪರೀಕ್ಷೆ ಮಾಡಿ.

ಅಧ್ಯಕ್ಷರು: ನೋಡಿ, ರೇವಣ್ಣನವರು ಏನು ಹೇಳಿದರು, ಅದನ್ನು ಕಡತದಿಂದ ತೆಗೆದು ಹಾಕಿದ್ದೇನೆ. (xxx xxx xxx)

ಶ್ರೀ ಹೆಚ್.ಡಿ. ರೇವಣ್ಣ: ಚರ್ಚೆಗೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಚರ್ಚೆಗೆ ಅವಕಾಶ ಕೊಡುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ, ನಾಲ್ಕೂವರೆಗೆ ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ನಾಲ್ಕೂವರೆಗೆ ಫಿಕ್ಸ್ ಮಾಡಿ. ನಾನು ನಾಲ್ಕೂವರೆಗೆ ಎಲ್ಲಾ ದಾಖಲೆ ಸಮೇತ ಇಲ್ಲಿ ಇಡುತ್ತೇನೆ.

ಅಧ್ಯಕ್ಷರು: ಆಯಿತು.

(xxx xxx) ಮಾನ್ಯ ಸಭಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ.